### ಆಚಾರ ವಿಚಾರ ಕ್ರಮ



ಪ್ರತಿಭಟನೆ ಮತ್ತು ಹೋರಾಟದ ಸಂದರ್ಭದಲ್ಲಿ ಅಕಾಲಿಕವೂ ಅಸಹಜವೂ ಆದ ರೀತಿಯಲ್ಲಿ ಮರಣಹೊಂದಿದ ವ್ಯಕ್ತಿಯು 'ಮಾಯಕ'ದಲ್ಲಿ ಇದ್ದುಕೊಂಡು ತನ್ನ ಅಕಾಲಿಕ ಸಾವಿಗೆ ಕಾರಣವಾದ ವ್ಯಕ್ತಿಯ ಮೇಲೆ ಸೇಡನ್ನು ತೀರಿಸಿ, ಅವನಿಂದಲೇ ಪೂಜೆ, ಗೌರವವನ್ನು ಪಡೆದು, ದೈವದ ಪದವಿಯನ್ನು ಸಂಪಾದಿಸುತ್ತಾನೆ. ಆರಾಧನೆಯ ಸಂದರ್ಭದಲ್ಲಿ ಇಂತಹ ಮಾಯಕದ ಜಗತ್ತಿನಿಂದ 'ಜೋಗ'ಕ್ಕೆ ಅಂದರೆ ಆರಾಧನೆಯ 'ಮಧ್ಯಂತರ ಜಗತ್ತಿಗೆ' ಬಂದು ಭೂತವು ಕಾಣಿಸಿಕೊಳ್ಳುತ್ತದೆ. ಮಧ್ಯಂತರ ಜಗತ್ತಿನ ಪರಿಕಲ್ಪನೆ ತುಳುವರ ಅದ್ಭುತವಾದ ಸೃಷ್ಟಿ!. ಆವೇಶ, ದರ್ಶನ, ಕಾಣ್ಕೆ, ಸಾಕ್ಷಾತ್ಕಾರ, ಸಂವಾದ, ಮಾತುಕತೆ ಇವುಗಳು ನಡೆಯುವ ಆರಾಧನೆಯ ನಿರ್ದಿಷ್ಟ ಆವರಣಕ್ಕೆ (ಕೋಲ/ನೇಮ ನಡೆಯುವ ಅಂಗಣಕ್ಕೆ) ಬಾನಲ್ಲಿ ಇರುವ ಈ ಅಗೋಚರ ಶಕ್ತಿಗಳು ಬರುವಂತೆ ಮಾಡುವುದು ಹೇಗೆ?. ಆ ಒಂದು ಸಂದರ್ಭವನ್ನು ಸೃಷ್ಟಿ ಮಾಡುವುದಕ್ಕಾಗಿಯೇ ದೈವಕ್ಕೆ ನಡೆದುಕೊಳ್ಳುವ ಎಲ್ಲ ಆಚಾರ–ವಿಚಾರ ಕ್ರಮಗಳನ್ನು ರೂಪಿಸಲಾಗಿದೆ ಎಂದು ಅನಿಸುತ್ತದೆ.

**–ಕೆ. ಚಿನ್ನಪ್ಪ ಗೌಡ**
**ಸಂಶೋಧಕ, ಜಾನಪದ ತಜ್ಞ**

ದೈವಗಳು ಅಥವಾ ಸತ್ಯಗಳು ಜನರಲ್ಲಿ ಮುಚ್ಚುಮರೆಯಿಲ್ಲದೆ ಮಾತನಾಡುತ್ತವೆ. ಇದು ಸಮಾಜದ ಜನರೇ ಪರಸ್ಪರ ಮಾತನಾಡುವ ಅಭಿವ್ಯಕ್ತಿ ಸ್ವಾತಂತ್ರ್ಯದ ಒಂದು ರೀತಿಯೆಂದೇ ಹೇಳಬಹುದು.''

''ಹಾಗೆಯೇ, ದೈವದ ಪ್ರತಿನಿಧಿಯಾಗಿ ಮಾತನಾಡುವ ವ್ಯಕ್ತಿಯನ್ನು ಇತರರಿಂದ ಪ್ರತ್ಯೇಕಿಸುವ ನಿಯಮಗಳಿವೆ. ಆತ ಸ್ನಾನ ಮಾಡಿ ಮಡಿಬಟ್ಟೆ ಉಟ್ಟಿರಬೇಕು. ಕೊರಳಲ್ಲಿ ಹೂಮಾಲೆ ಆಭರಣಗಳನ್ನು ಧರಿಸಿರಬೇಕು. ಮುಖದಲ್ಲಿ ಮುಖವರ್ಣಿಕೆ ಬಿಡಿಸಿರಬೇಕು. ಹಣೆಗೆ ತಲೆಪಟ್ಟಿ, ತಲೆಮಣಿ, ತಲೆಪಟ್ಟ ಮೊದಲಾದ ಶಿರೋಭೂಷಣಗಳನ್ನು ಧರಿಸಿರಬೇಕು. ಕೈಯಲ್ಲಿ ಆಯುಧಗಳನ್ನು ಹಿಡಿದಿರಬೇಕು. ಸೊಂಟದ ಕೆಳಗೆ ಎಳೆಯ ತೆಂಗಿನ ಗರಿಯ ತಿರಿವಿನ್ಯಾಸವನ್ನು ಧರಿಸಿರಬೇಕು. ಕಾಲಿಗೆ ಗಗ್ಗರ ಕಟ್ಟಿಕೊಂಡಿರಬೇಕು. ಬೆನ್ನಿಗೆ ಅಣಿ ಎಂಬ ದೊಡ್ಡ ವೇಷಭೂಷಣವನ್ನು ಬಿಗಿದುಕೊಂಡಿರಬೇಕು. ಮುಖವಾಡ ಧರಿಸಬೇಕು. ದೈವಾರಾಧನೆಗೆ ವಿಶಿಷ್ಟವಾದ ವಿನ್ಯಾಸದ ಕುಣಿತ ಮಾತುಗಾರಿಕೆ ಇರುತ್ತದೆ. ದೈವದ ನಿಗೂಢತೆಗೆ ಪೂರಕವಾದ ರೀತಿಯ ಮಂದ ಬೆಳಕು ಇರಬೇಕು. ಭೂತದ ಪರಿಕಲ್ಪನೆಗೆ ಇಂಬುನೀಡುವ ಅನೇಕ ತಯಾರಿಗಳನ್ನು ಮಾಡಬೇಕು. ಪೂರ್ವ ಸಿದ್ಧತೆಗಳು ನೂರಾರಿವೆ. ಹಂತ ಹಂತವಾಗಿ ಈ ಸಿದ್ಧತೆಗಳನ್ನು ಮಾಡಬೇಕು. ದೈವದ ಕಥಾನಕದ ಪ್ರಸ್ತುತಿ, ದೈವದ ಆಯುಧ ಆಭರಣಗಳಿರುವ ಭಂಡಾರವನ್ನು ಮೆರವಣಿಗೆಯಲ್ಲಿ ತರುವುದು, ಗುಡಿಯನ್ನು ಅಲಂಕರಿಸುವುದು, ಚಪ್ಪರ ಹಾಕುವುದು, ದೈವದ ಸತ್ಕಾರಕ್ಕೆ ಬೇಕಾದ ಆಹಾರ ಮತ್ತು ಪಾನೀಯಗಳನ್ನು ಸಿದ್ಧಪಡಿಸುವುದು ಇತ್ಯಾದಿ ಪೂರ್ವಸಿದ್ಧತೆಗಳು ಈ ಆರಾಧನೆಗೆ ಸಾಂಸ್ಕೃತಿಕ ಆಯಾಮವನ್ನು ತಂದುಕೊಡುತ್ತವೆ.''

### ಆ ಕಿಂಚಿತ್ ಸಮಯ...

ಜನರ ದೃಷ್ಟಿಯಲ್ಲಿ 'ದೈವ' ಅಂದರೆ – ಪ್ರಶಸ್ತವಾದ ಕಾಲ, ಸ್ಥಳ ಮತ್ತು ಸಂದರ್ಭವನ್ನು ಕಲ್ಪಿಸಿದರೆ ವ್ಯಕ್ತಿ ಮಾಧ್ಯಮದ ಮೂಲಕ ಕಾಣಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವ 'ಅಸಾಮಾನ್ಯ ಶಕ್ತಿ'ಯಾಗಿ ಪ್ರಕಟಗೊಳ್ಳುವುದಾಗಿದೆ. ವ್ಯಕ್ತಿಯ ಮೇಲೆ ದೈವ ಆವೇಶವಾಗುವ ಹಂತ ಮತ್ತು ಕೊನೆಗೆ ಶರೀರದಿಂದ ಬಿಟ್ಟುಹೋಗುವ ಹಂತ, ಈ ನಡುವಿನ ಅವಧಿಯು ಸಾಂಸ್ಕೃತಿಕವಾಗಿ ಬಹಳ ಮುಖ್ಯವಾದುದು. ದೈವವನ್ನು ಬರಮಾಡಿಕೊಳ್ಳುವ ಉದ್ದೇಶದಿಂದ ಹೇಳುವ ವಿನಂತಿರೂಪದ ಮಾತುಗಳನ್ನು 'ಪಾರಿ' ಎಂದೂ, ದೈವ ಕೊಡುವ ಅಭಯದ ನುಡಿಗಳನ್ನು 'ಮದಿಪು' ಎಂದೂ ಕರೆಯುತ್ತಾರೆ. ದೈವದ ಪರಿಕಲ್ಪನೆಗೆ ಅನುಗುಣವಾಗಿ ಈ ಮಾತುಗಳು ಪ್ರೌಢವೂ ಶೈಲೀಕೃತವೂ ಆಗಿರುತ್ತದೆ. ಈ ಮಾತುಗಳ ಶಬ್ದ ಶಕ್ತಿ (word power) ಅಪ್ರತಿಮವಾಗಿದೆ. 'ಪಾರಿ'ಯಲ್ಲಿ ನಂಬಿದ ದೈವದ ಉಗಮ ಹೇಗಾಯಿತು, ಅದರ ಕಾರಣಿಕಗಳು, ಮಹಿಮೆಗಳು ಏನೇನು ಮತ್ತು ಪ್ರಸರಣದ ವಿವರಗಳೇನು ಎಂಬ ಉಲ್ಲೇಖವಿರುತ್ತವೆ. ಅಸಾಮಾನ್ಯ ರೀತಿಯಲ್ಲಿ ಬಾಳಿದ ವ್ಯಕ್ತಿಗಳ ಗುಣಗಾನ ಮಾಡುವ ಪಾಡ್ದನಗಳನ್ನು ಕಲಾವಿದರು ಹಾಡುವ ಮೂಲಕ ಆರಾಧನೆಗೆ ವಿಶೇಷ ಅರ್ಥವಂತಿಕೆ ಪ್ರಾಪ್ತವಾಗುತ್ತದೆ. ದೈವಗಳ ಸಾಂಸ್ಕೃತಿಕ ಹಿರಿಮೆ, ಸಿರಿವಂತಿಕೆಯನ್ನು ಅವುಗಳ ಆರಾಧನಾ ಪ್ರಭೇದಗಳಾದ ಕೋಲ, ನೇಮ, ಮೆಚ್ಚಿ, ಬಂಡಿ, ಜಾಲಾಟ, ಮೈಮೆಗಳಲ್ಲಿ ಧಾರಾಳವಾಗಿ ಕಾಣಬಹುದು ಎಂದು ಚಿನ್ನಪ್ಪ ಗೌಡರು ಹೇಳುತ್ತಾರೆ.

### ನೇಮ ಅಥವಾ ಕೋಲದಲ್ಲಿ ಅನುಸರಿಸುವ ಕ್ರಮಗಳು

ದೈವ ನರ್ತಕರೂ ಆಗಿರುವ, ತುಳು ಸಾಹಿತ್ಯ



ಚಿತ್ರ: ಆದಿತ್ಯ ಜಿ. ತಿಳಿ